

"ಲೇಯ್ ನೀವಿಬ್ರು ಹೋಗಿ ಕೈಕಾಲು ಮುಖ ತೊಕ್ಕಂಬರ್ರಿ. ಆಮ್ಯಾಲೆ ನಾವು ಹೋಗ್ತೀವಿ" ಅಂದ ಹಿರಿಯ. ಸರಿ ಅಂತ ಇನ್ನಿಬ್ಬರು ಹೊರಟರು. ಅವರು ಬಂದ ಮೇಲೆ ಹಿರಿಯನೂ ಮತ್ತೊಬ್ಬನೂ ಹೋಗಿ ಬಂದರು. ಬಡಿಸಿಕೊಂಡಿದ್ದಂತೂ ರೆಡಿಯಿತ್ತು.

"ಸುರು ಮಾಡಣ್ಣ ಮೊದಲು... ದೊಡ್ಡತ ನೀನು" ಅಂದ ಮೊದಲು ಕೈಕಾಲು ತೊಳೆಯಲು ಹೋಗಿದ್ದ ಇಬ್ಬರಲ್ಲಿ ಒಬ್ಬ.

ಮೊದಲು ಹಿರಿಯ ತಮ್ಮಿಬ್ಬರನ್ನು ಕೈಕಾಲು ತೊಳೆದುಕೊಳ್ಳಲು ಕಳಿಸಿದ್ದರ ಹಿಂದೆ ಏನಾದರೂ ಕರಾಮತ್ತು ಇದೆಯ ಅಂತ ಅನುಮಾನವೇ ಬಂದಿತ್ತೋ ಅಥವಾ ಯಾವತ್ತೂ ಹೇಳುವಂತೆ ಆ ಮಾತು ಹೇಳಿದನೋ ಗೊತ್ತಿಲ್ಲ. ಆದರೆ, ಈಗ ಈ ಸಂದರ್ಭದಲ್ಲಿ ಅವನು ಹೇಳಿದ ಆ ಮಾತು ಅನುಮಾನದಿಂದಲೇ ಹುಟ್ಟಿದ್ದು ಎಂದು ಹಿರಿಯನಿಗೆ ಅನಿಸಿಬಿಟ್ಟಿತು. ಅನುಮಾನಕ್ಕಿಂತ ದೊಡ್ಡ ರೋಗ ಎಲ್ಲಿದೆ? ಮತ್ತದಕ್ಕೆ ಮದ್ದಾದರೂ ಎಲ್ಲಿದೆ? 'ಈ ಮಕ್ಕಳಿಬ್ಬರು ನಾವು ಕೈಕಾಲು ತೊಳಿಯೋಕೆ ಹೋದಾಗ ಹುಗ್ಗಿಯೊಳಗೆ ಏನೋ ಕಲಿಸ್ಯಾರಂತ ಕಾಣುಸ್ತದ. ಎಲ್ಲ ಮಾಲು ತಾವೇ ಹೊಡಕಬೇಕಂತ ಪ್ಲ್ಯಾನ್ ಮಾಡ್ಯಾರ ಬೋಸುಡಿ ಮಕ್ಳು... ಅದಿಕೇ ನಮಗ ಮೊದಲು ತಿನ್ರೀ ಅಂತ ಹೊಸಾ ಆಟ ಹಚ್ಯಾರ' ಅಂತ ಆಲೋಚಿಸಿದ ಹಿರಿಯ. ಅವನ ಆಲೋಚನೆಯ ಸುಳುಹು ಅವನ ಜೊತೆಗಿದ್ದ ಮತ್ತೊಬ್ಬನಿಗೂ ತಾಕದೆ ಇರಲಿಲ್ಲ. ಇದೆಲ್ಲವನ್ನೂ ಮನಸಲ್ಲಿಟ್ಟುಕೊಂಡೇ ಹಿರಿಯ–

"ಹೇ... ಹಂಗೆಂಗಾತಾದ? ಸಣ್ಣವರಿಗಿ ಮೊದಲು ಉಣಿಸಿ ಆಮ್ಯಾಲೆ ದೊಡ್ಡವರು ಉಣಬೇಕು" ಅಂದುಬಿಟ್ಟ. ಅಲ್ಲಿಗೆ 'ಸುರು ಮಾಡಣ್ಣ... ದೊಡ್ಡತ ನೀನು' ಅಂತ ಕ್ಯಾಶುವಲ್ಲಾಗಿ ಅಂದಿದ್ದವನಿಗೆ, ದೊಡ್ಡಾತನ ಈ ಮಾತು ಈಗ ನಿಜವಾಗಲೂ ಅನುಮಾನಕ್ಕೆ ದಾರಿ ಮಾಡಿಕೊಟ್ಟುಬಿಟ್ಟಿತು. 'ಅದೇ ಕಾರಣಕ್ಕೆ ಈತ ಮೊದಲು ನಮಗೆ ಕೈಕಾಲು ತೊಳಕಂಬರಾಕ ಕಳಿಸಿದ್ದು. ನಾವು ಆ ಕಡೆ ಹೋದಾಗ ಏನೋ ಕಲಿಸ್ಯಾರ ಹುಗ್ಯಾಗ. 'ನೀನೇ ಸುರು ಮಾಡಣ ಮೊದ್ಲು' ಅಂತ ನಾನು ಅಂದಿದ್ದೇ ಚೊಲೋ ಆಯ್ತು. ಎಲ್ಲ ಹುಳುಕು ತಾನಾಗಿ ಹೊರಗ ಬಿತ್ತೀಗ' ಅಂತ ಆಲೋಚಿಸಿದ ಇವನು.

ಬಿರುಸಿಗೆ ಬಿತ್ತು ಮಾತು.

ಯಾರೂ ಉಣಾಕ ತಯಾರಿಲ್ಲ. ಸಾವು, ಸೋಲುಗಳ ಭಯದಲ್ಲಿ ಸ್ವಲ್ಪ ಹೊತ್ತಿನ ಹಿಂದೆ ಒದ್ದಾಡಿದ ನಾನು ಕೂಡ 'ಯಾರು ಮೊದ್ಲು ಉಣ್ತಾರೋ. ಯಾರ ಕೈ ಮೇಲಾಗುತ್ತೋ' ಎಂಬ ಕಥನಕುತೂಹಲಕ್ಕೆ ಪಕ್ಕಾಗಿ ಎಲ್ಲ ಮರೆತು ತುದಿಗುಂಡಿಯಲ್ಲಿ ಕುಂತು ಕಾಯತೊಡಗಿದೆ.

ಯಾರೂ ಉಣವಲ್ಲರು.

ಸಮಯ ಸರೀತಲೇ ಇತ್ತು.

'ಗುಕೂಕ್ ಗೂಕ್' ಆ ನಿಶ್ಶಬ್ದವನ್ನು ಸೀಳುತ್ತ ಕೂಗಿತು ಒಂದು ಗೂಗಿ.

ರೆವ್... ರೆವ್... ಅಂತ ತನ್ನ ಅಗಲವಾದ ಬೀಸಣಿಗೆಯ ರೆಕ್ಕೆ ಬೀಸುತ್ತ, ಆ ಕತ್ತಲಲ್ಲಿ ತನ್ನ ಗುಲಗಂಜಿಯಂಥ ಕೆಂಪು ಕಣ್ಣನ್ನು ಹೊಳೆಸುತ್ತ ಅವರ ತಲೆಗಳಿಗಿಂತ ಸ್ವಲ್ಪ ಎತ್ತರದಲ್ಲಿ, ನನ್ನ ಕಾಲುಗಳಿಗಿಂತ ಸ್ವಲ್ಪ ಕೆಳಗೆ ಕನಕಪ್ಪಡಿಯೊಂದು ಹಾರಿ ಹೋಯಿತು.

ಅವರು ನಸುಕಾಗುವುದರೊಳಗೆ ಯಾರ ಕೈಗೂ ಸಿಗದಂತೆ ತಮ್ಮ ತಮ್ಮ ಗೂಡು ಸೇರಿಕೊಳ್ಳಬೇಕಿತ್ತು. ಮಾಲು ಹಂಚಿಕೊಂಡದ್ದೇನೋ ಆಗಿದೆ. ಈ ಹುಗ್ಗಿ ಬೋಗುಣಿಯನ್ನೊಂದು ಬಿಚ್ಚದೆ ಇದ್ದರೆ ದೋಷ ಇರಲಿಲ್ಲ. ಕಳ್ಳನೂ ಒಳ್ಳೆಯವನೂ ಎಲ್ಲರೂ ದುಡಿಯೋದೇ ಅನ್ನಕ್ಕಾಗಿ. ಅದರೊಳಗೂ ನೀಡಿಟ್ಟುಕೊಂಡದ್ದನ್ನು ಉಣ್ಣದೆ ಹಂಗೇ ಎದ್ದು ಹೋದ್ರೆ ಅದು ಅನ್ನಪೂರ್ಣೇಶ್ವರಿಗೇ ಮಾಡಿದ ಅವಮಾನ ಅಂತ ಅವರ ನಂಬಿಕೆ.